# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 276 (120) |
| ಉತ್ತರಿಸಬೇಕಾದ ದಿನಾಂಕ | 13-09-2022 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ನಗರದಲ್ಲಿ ಉತ್ಪತ್ತಿಯಾಗುವ ಒಳಚರಂಡಿ ನೀರನ್ನು ಯಾವ ರೀತಿಯಲ್ಲಿ ಸಂಸ್ಕರಿಸಿ ಆ ನಂತರ ಎಲ್ಲಿಗೆ ಹರಿಸಲಾಗುತ್ತಿದೆ; (ವಿವರ ನೀಡುವುದು) | ಬಳ್ಳಾರಿ ನಗರಕ್ಕೆ ಒಳಚರಂಡಿ ಯೋಜನೆಯಡಿ ಮಲಿನ ನೀರನ್ನು ಸಂಸ್ಕರಿಸಲು 30 ಎಂ.ಎಲ್.ಡಿ, 15 ಎಂ.ಎಲ್.ಡಿ ಹಾಗೂ 10 ಎಂ.ಎಲ್.ಡಿ ಸಾಮರ್ಥ್ಯದ ಮಲಿನ ನೀರಿನ ಶುದ್ಧೀಕರಣ ಘಟಕಗಳನ್ನು ನಿರ್ಮಿಸಲಾಗಿದೆ. ಈ ಘಟಕಗಳಿಂದ ಸಂಸ್ಕರಿಸಿದ ಮಲಿನ ನೀರನ್ನು ಪ್ರಾಕೃತಿಕ ನಾಲೆಯಲ್ಲಿ ವಿಸರ್ಜಿಸಲಾಗುತ್ತದೆ. ಇದರಲ್ಲಿ ಸಂಸ್ಕರಣಗೊಂಡ ಮಲೀನ ನೀರಿನ ಪ್ರಮಾಣದಲ್ಲಿ ಪ್ರತಿದಿನ 3 ಎಂ.ಎಲ್.ಡಿ ಪ್ರಮಾಣದ ಸಂಸ್ಕರಿಸಿದ ನೀರನ್ನು ಮೆ\|\| ಜಾನಕಿ ಕಾರ್ಪೊರೇಷನ್ ಬಳ್ಳಾರಿ ಕಾರ್ಖಾನೆಗೆ ಮರು ಬಳಕೆಗಾಗಿ (Reuse) ಸರಬರಾಜು ಮಾಡಲಾಗುತ್ತಿದೆ. ಹಾಗೂ ಅಮೃತ್ ಯೋಜನೆಯಡಿ ಹೆಚ್ಚುವರಿ ಅನುದಾನದಲ್ಲಿ 2 ಎಂ.ಎಲ್.ಡಿ ಸಾಮರ್ಥ್ಯದ ಮಲಿನ ನೀರಿನ ಶುದ್ಧೀಕರಣ ಘಟಕ ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದೆ.<br>ಪ್ರಸ್ತುತ ಬಳ್ಳಾರಿ ನಗರದ ಒಳಚರಂಡಿ ವ್ಯವಸ್ಥೆಯ ನಿರ್ವಹಣೆಯನ್ನು ದಿನಾಂಕ: 01-06-2017 ರಿಂದ ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ ಇವರ ವತಿಯಿಂದ ನಿರ್ವಹಿಸಲಾಗುತ್ತಿದೆ. |
| ಆ) | ಈ ಒಳಚರಂಡಿ ನೀರನ್ನು ಸಂಸ್ಕರಿಸುವ ಘಟಕವನ್ನು ಅರಂಭಿಸಲಾಗಿದೆಯೇ; ಹಾಗಿಲ್ಲವಾದಲ್ಲಿ ಯಾವ ಕಾಲಮಿತಿಯಲ್ಲಿ ಸ್ಥಾಪಿಸಲಾಗುವುದು; ಇದರ ಅಂದಾಜು ವೆಚ್ಚವೆಷ್ಟು; (ಪೂರ್ಣ ವಿವರ ನೀಡುವುದು) | ಅಮೃತ್ ಯೋಜನೆಯ ಹೆಚ್ಚುವರಿ ಅನುದಾನ ರೂ.2069.00 ಲಕ್ಷಗಳಲ್ಲಿ ಒಳಚರಂಡಿ ಕಾಮಗಾರಿ ಪ್ರಗತಿಯಲ್ಲಿದ್ದು, ಈ ಯೋಜನೆಯಡಿ, 2 ಎಂ.ಎಲ್.ಡಿ. ಸಾಮರ್ಥ್ಯದ ಮಲೀನ ನೀರು ಸಂಸ್ಕರಣಾ ಘಟಕ ಕೈಗೊಂಡಿದ್ದು, ಶೇ.90% ರಷ್ಟು ಕಾಮಗಾರಿ ಪೂರ್ಣಗೊಂಡಿರುತ್ತದೆ. ಸದರಿ ಕಾಮಗಾರಿಯು ಅಕ್ಟೋಬರ್-2022 ರಲ್ಲಿ ಪೂರ್ಣಗೊಳಿಸಿ, ಚಾಲನೆಗೊಳಿಸಲು ಉದ್ದೇಶಿಸಿಲಾಗಿದೆ. 2 ಎಂ.ಎಲ್.ಡಿ. ಸಾಮರ್ಥ್ಯದ ಮಲೀನ ನೀರು ಸಂಸ್ಕರಣಾ ಘಟಕದ ಅಂದಾಜು ವೆಚ್ಚ ರೂ.415.00 ಲಕ್ಷಗಳು. |
| ಇ) | ಈ ನೀರನ್ನು ಪೂರ್ಣ ಪ್ರಮಾಣದಲ್ಲಿ ಸಂಸ್ಕರಿಸಿ ಕೆರೆಗೆ ಹರಿಸಲು ಅಥವಾ | ಬಳ್ಳಾರಿ ಮಹಾನಗರ ವ್ಯಾಪ್ತಿಯಲ್ಲಿ 30 ಎಂ.ಎಲ್.ಡಿ ಹಾಗೂ 15 ಎಂ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ಸಂಸ್ಕರಣಾ ಘಟಕಗಳ ನಿರ್ವಹಣೆಯನ್ನು ಬಳ್ಳಾರಿ ಮಹಾನಗರ ಪಾಲಿಕೆ ವತಿಯಿಂದ |

| | | |
|---|---|---|
| | ಉದ್ಯಾನವನಗಳಿಗೆ ಮತ್ತು ಸರ್ಕಾರಿ ಕಾಮಗಾರಿಗಳಿಗೆ ಬಳಸಲು ಸರ್ಕಾರದ ಕ್ರಮಗಳೇನು? (ವಿವರ ನೀವುದು) | ನಿರ್ವಹಿಸಲಾಗುತ್ತಿದೆ ಹಾಗೂ ಅಮೃತ್ ಯೋಜನೆಯಡಿ ಬಳ್ಳಾರಿ ನಗರದಲ್ಲಿ ಚಾಲನೆಯಲ್ಲಿರುವ 10 ಎಂ.ಎಲ್.ಡಿ ಸಾಮರ್ಥ್ಯದ ಎಸ್.ಬಿ.ಆರ್ ಟೆಕ್ನಾಲಾಜಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಮುಂದಿನ ನಿರ್ವಹಣೆಗಾಗಿ ಮಹಾನಗರ ಪಾಲಿಕೆ ಬಳ್ಳಾರಿ ರವರಿಗೆ ಹಸ್ತಾಂತರಿಸಲಾಗುವುದು.<br><br>ಮುಂದುವರೆದು, ಪೂರ್ಣಪ್ರಮಾಣದಲ್ಲಿ ತ್ಯಾಜ್ಯ ನೀರು ಸಂಸ್ಕರಿಸಿ ಮರು ಬಳಕೆ ಮಾಡಲು ಸದ್ಯಕ್ಕೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ: ನಅಇ 129 ಯುಎಂಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು